ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363 / 2419301

e-mail: Registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

**ಸಂಖ್ಯೆ: ಎಸಿ4/59/2021-22**

**ದಿನಾಂಕ:23-08-2021**

## ಅಧಿಸೂಚನೆ

**ವಿಷಯ:-** 2021-22ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಕೋರ್ಸುಗಳಿಗೆ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಸಾರ ಪ್ರವೇಶಾತಿ ನೀಡುವ ಬಗೆಗೆ.

**ಉಲ್ಲೇಖ:-** 1) ವಿಶ್ವವಿದ್ಯಾನಿಲಯವು ಶುಲ್ಕ ನಿಗಧಿಪಡಿಸಿರುವ ಅಧಿಸೂಚನೆ ಸಂಖ್ಯೆ: ಎಸಿ2(ಎಸ್)/13/2021-22,ದಿನಾಂಕ:13-07-2021.

2) ಸರ್ಕಾರದ ಆದೇಶ ಸಂಖ್ಯೆ: ಇಡಿ 35 ಇಜಿಒವಿ2020, ಬೆಂಗಳೂರು, ದಿನಾಂಕ:27-07-2021.

3) ಸರ್ಕಾರದ ಆದೇಶ ಸಂಖ್ಯೆ: ಇಡಿ 260 ಯುಎನ್ಇ 2019 (ಭಾಗ-1) ದಿನಾಂಕ 07-08-2021.

*****

ಉಲ್ಲೇಖಿತ (3)ರ ಸರ್ಕಾರಿ ಆದೇಶದಂತೆ 2021-22ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಬಿ.ಎ, ಬಿ.ಎಸ್ಸಿ, ಬಿ.ಸಿ.ಎ, ಬಿ.ಕಾಂ, ಬಿ.ಬಿ.ಎ, ಬಿ.ಬಿ.ಎ(ಟೂರಿಸಂ ಅಂಡ್ ಟ್ರಾವೆಲ್), ಬಿ.ಬಿ.ಎ (ಟೂರಿಸಂ ಅಂಡ್ ಹಾಸ್ಪಿಟಾಲಿಟಿ), ಬಿ.ವಿ.ಎ, ಬಿ.ಎ(ಫೈನ್ ಆರ್ಟ್ಸ್), ಬಿ.ಎಸ್.ಡಬ್ಲ್ಯೂ, ಬಿಎಎಸ್ಎಲ್‌ಪಿ, ಬಿಎ.ಎಲ್ಎಲ್‌ಬಿ, ಬಿ.ಕಾಂ.ಎಲ್ಎಲ್‌ಬಿ ಸ್ನಾತಕ ಪದವಿ ಪ್ರೊಗ್ರಾಂಗಳ ಪ್ರವೇಶಾತಿಯನ್ನು ಭಾರತ ಸರ್ಕಾರವು ಪ್ರಕಟಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಸಾರ UG-CBCS Regulation ನಲ್ಲಿರುವ ಪ್ರವೇಶಾತಿ ಅರ್ಹತೆ ಹಾಗೂ ಹಿಂದಿನ ಶೈಕ್ಷಣಿಕ ಸಾಲಿನಂತೆ ಭೌತಿಕವಾಗಿ (offline) ಪ್ರವೇಶಾತಿಯನ್ನು ನೀಡುವಂತೆ ಸೂಚಿಸಲಾಗಿದೆ. (ಉಲ್ಲೇಖಿತ-3ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020 ಅನುಷ್ಠಾನದ ಸಂಬಂಧ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಬಂಧ-1ನ್ನು ಈ ಅಧಿಸೂಚನೆಯೊಂದಿಗೆ ಲಗತ್ತಿಸಿದೆ)

ಪ್ರವೇಶಾತಿಯನ್ನು ನೀಡಿದ ನಂತರ ಸಮಗ್ರ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (Unified University & College Management System -UUCMS) ಅಡಿಯಲ್ಲಿನ www.uucms.karanataka.gov.in ಈ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಕಾಲೇಜು ವತಿಯಿಂದಲೇ ಆಯಾ ದಿನವೇ ಭರ್ತಿ ಮಾಡುವುದು. ಪ್ರವೇಶಾತಿಯ ವಿವರಗಳು ಈ ಕೆಳಕಂಡಂತಿರುತ್ತದೆ.

| | | |
|---|---|---|
| **1** | **ಪ್ರವೇಶಾತಿ ಪ್ರಾರಂಭ ದಿನಾಂಕ** | **23-08-2021** |
| **2** | **ಪ್ರವೇಶಾತಿ ಕೊನೆ ದಿನಾಂಕ** | **30-09-2021** |
| **3** | **ತರಗತಿ ಪ್ರಾರಂಭ ದಿನಾಂಕ** | **01-10-2021** |
| **4** | **ಪ್ರವೇಶಾತಿ ರದ್ದುಪಡಿಸಿಕೊಳ್ಳಲು ಕೊನೆಯ ದಿನಾಂಕ** | **30-10-2021** |

ಮೇಲಿನ ಪ್ರವೇಶಾತಿ ದಿನಾಂಕಗಳನ್ನು ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ವೆಬ್‌ಸೈಟ್ ಮತ್ತು ಸೂಚನಾ ಫಲಕದಲ್ಲಿ ಪ್ರಕಟಿಸಿ, ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ವಿದ್ಯಾರ್ಥಿಗಳ ಮತ್ತು ಪೋಷಕರ ಗಮನಕ್ಕೆ ತರಲು ಹೆಚ್ಚು ಪ್ರಚಾರ ಪಡಿಸಬೇಕೆಂದು ಸೂಚಿಸಲಾಗಿದೆ.

ಎರಡು ಮತ್ತು ಮೂರನೇ ವರ್ಷದ ಸ್ನಾತಕ ಕೋರ್ಸ್‌ಗಳ ಪ್ರವೇಶಾತಿಗೆ ಪ್ರತ್ಯೇಕ ಅಧಿಸೂಚನೆ ಹೊರಡಿಸಲಾಗುವುದು.

**ಪ್ರಾಂಶುಪಾಲರುಗಳಿಗೆ /ವಿದ್ಯಾರ್ಥಿಗಳಿಗೆ ಸೂಚನೆಗಳು:-**

1. ವಿಶ್ವವಿದ್ಯಾನಿಲಯದ ಘಟಕ/ಸರ್ಕಾರಿ/ಅನುದಾನಿತ/ಸ್ವಾಯತ್ತ ಕಾಲೇಜುಗಳು ಪ್ರವೇಶಾತಿಗಳನ್ನು ಹಿಂದಿನ ಶೈಕ್ಷಣಿಕ ಸಾಲಿನಂತೆ ಮೆರಿಟ್ ಆಧಾರದ ಮೇಲೆ ಮಾಡಿಕೊಳ್ಳುವಾಗ ಆಯಾ ಕಾಲೇಜು ವತಿಯಿಂದಲೇ ಪ್ರವೇಶಾತಿ ವೇಳಾಪಟ್ಟಿಯನ್ನು (Admission Calender) ಸಿದ್ಧಪಡಿಸಿ, ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಿ, ವಿಶ್ವವಿದ್ಯಾನಿಲಯವು ಮೇಲೆ ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಪ್ರವೇಶಾತಿ ನೀಡುವುದು.

2. ಆಯಾ ಕಾಲೇಜಿನ ಪ್ರಾಂಶುಪಾಲರು ಅಥವಾ ನೋಡೆಲ್ ಅಧಿಕಾರಿಗೆ ವಿಶ್ವವಿದ್ಯಾನಿಲಯದ ನೋಡೆಲ್ ಆಫೀಸರ್/ ಮುಖಾಂತರ Login Credential ನ್ನು ಒದಗಿಸಿದ ನಂತರ ಸಮಗ್ರ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (Unified University & College Management System –UUCMS) ಅಡಿಯಲ್ಲಿನ www.uucms.karanataka.gov.in ಈ ವೆಬ್‌ಸೈಟ್‌ನಲ್ಲಿ ಪ್ರವೇಶಾತಿಗಳ ವಿವರಗಳನ್ನು ಕಾಲೇಜು ವತಿಯಿಂದ ಭರ್ತಿ ಮಾಡುವುದು.

3. ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಸಾರ ಮೈಸೂರು ವಿಶ್ವವಿದ್ಯಾನಿಲಯವು ಸ್ನಾತಕ ಪದವಿ ಪ್ರೊಗ್ರಾಂಗಳ ವಿನಿಯಮಗಳನ್ನು (Regulations) ಸಿದ್ಧಪಡಿಸುತ್ತಿದ್ದು, ಪ್ರಾಧಿಕಾರಗಳ ಅನುಮೋದನೆ ಪಡೆದು ನಂತರ ಅಧಿಸೂಚನೆ ಹೊರಡಿಸಲಾಗುವುದು.

4. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಕಾಲೇಜುಗಳ ಪಟ್ಟಿ, ಪ್ರೊಗ್ರಾಂಗಳ ವಿವರ, ಸಂಖ್ಯಾಮಿತಿ ಮತ್ತು ಪ್ರವೇಶಾತಿ ಶುಲ್ಕಗಳನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. ವಿದ್ಯಾರ್ಥಿಗಳು ಇದನ್ನು ಪರಿಶೀಲಿಸಿ ಅರ್ಜಿಯನ್ನು ಸಲ್ಲಿಸುವುದು.

5. ಕೋವಿಡ್-19 (ಕೊರೋನಾ ವೈರಸ್) ನಿಯಂತ್ರಿಸುವ ಪ್ರಯುಕ್ತ ವಿದ್ಯಾರ್ಥಿಗಳು/ಪೋಷಕರು ಪ್ರವೇಶಾತಿ ಸಂದರ್ಭದಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಮತ್ತು ಸಾನಿಟೈಸರ್ ಕಡ್ಡಾಯವಾಗಿ ಬಳಸುವ ಬಗ್ಗೆ ಅರಿವು ಮೂಡಿಸಲು ತಿಳಿಸಲಾಗಿದೆ.

6. ವಿಶ್ವವಿದ್ಯಾನಿಲಯ ಅಧಿಸೂಚನೆ ಸಂಖ್ಯೆ:R2-588/83-84, ದಿನಾಂಕ:24-11-1987ರ ರೀತ್ಯಾ ಒಬ್ಬ ವಿದ್ಯಾರ್ಥಿ ಏಕ ಕಾಲದಲ್ಲಿ ಎರಡು ಪದವಿ ಕೋರ್ಸುಗಳನ್ನು ವ್ಯಾಸಂಗ ಮಾಡಲು ಅವಕಾಶ ಇರುವುದಿಲ್ಲ.

7. **ವಿಶ್ವವಿದ್ಯಾನಿಲಯದ ಘಟಕ/ಸಂಯೋಜಿತ/ಸ್ವಾಯತ್ತತೆ ಪಡೆದಿರುವ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಇಚ್ಚಿಸುವ ಕರ್ನಾಟಕ ರಾಜ್ಯದ ಪಿ.ಯು ಬೋರ್ಡ್ ಹೊರತುಪಡಿಸಿ / ಹೊರ ರಾಜ್ಯದ/ NIOS/ವಿದೇಶಿ(Foreign National) ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ಅರ್ಹತಾ ಪತ್ರದ (Eligibility Certificate) ಶುಲ್ಕವನ್ನು ಪಾವತಿಸಿರುವ ಬಗ್ಗೆ ಮತ್ತು ಅದರ ಪಾವಿತ್ರತೆ ( Genuinity) ಬಗ್ಗೆ Verification ಹಂತದಲ್ಲಿ ಪರಿಶೀಲಿಸುವುದು.**

8. **ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ವರ್ಗಾವಣೆ ಪ್ರವೇಶಕ್ಕೆ ಅವಕಾಶವಿರುವುದಿಲ್ಲ** ಹಾಗೂ ವಿಶ್ವವಿದ್ಯಾನಿಲಯಕ್ಕೆ ನಿಗದಿತ ಶುಲ್ಕ ಪಾವತಿಸದೆ / ಪೂರ್ಣ ದಾಖಲೆಗಳನ್ನು ಒದಗಿಸದಿದ್ದರೆ, ಅಂತಹ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ವಿಶ್ವವಿದ್ಯಾನಿಲಯ ಅನುಮೋದಿಸುವುದಿಲ್ಲ.

9. ಭಾರತ ಸರ್ಕಾರ/ ಕರ್ನಾಟಕ ಸರ್ಕಾರದಿಂದ ವಿದ್ಯಾರ್ಥಿ ವೇತನ ಮಂಜೂರಾತಿಗೆ ಅರ್ಹವಿರುವ ಕಾಲೇಜುಗಳು, ವಿದ್ಯಾರ್ಥಿಗಳ ತಂದೆ,ತಾಯಿ/ಪೋಷಕರ ವಾರ್ಷಿಕ ವರಮಾನ 2.5 ಲಕ್ಷಕ್ಕಿಂತ ಕಡಿಮೆ

ಇದ್ದಲ್ಲಿ, ಅಂತಹ SC/ST ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡುವುದು. ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿದ್ಯಾರ್ಥಿ ವೇತನಕ್ಕೆ ನಿಗಧಿತ ಸಮಯದಲ್ಲಿ ಸಂಬಂಧಿಸಿದ ಇಲಾಖೆಗೆ ಅರ್ಜಿ ಸಲ್ಲಿಸಿರಬೇಕು ಮತ್ತು ಪ್ರಾಂಶುಪಾಲರು ಸಹ ಅರ್ಜಿ ಸಲ್ಲಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ವಿದ್ಯಾರ್ಥಿ ವೇತನ ಮಂಜೂರಾಗದಂತಹ ಅಥವಾ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದಂತಹ ವಿದ್ಯಾರ್ಥಿಗಳಿಂದ ಪೂರ್ಣ ಪ್ರವೇಶ ಶುಲ್ಕವನ್ನು ಪಾವತಿಸಿಕೊಳ್ಳಬೇಕು.

10. ಸರ್ಕಾರದ ಆದೇಶ ಸಂಖ್ಯೆ:ಹಿಂವಕ/589/ಬಿಎಂಎಸ್2013, ಬೆಂಗಳೂರು, ದಿನಾಂಕ:05-10-2013 ಮತ್ತು 06-08-2014ರ ಪ್ರಕಾರ ಹಿಂದುಳಿದ ವರ್ಗಗಳ ಪ್ರವರ್ಗ-1ರ ವಿದ್ಯಾರ್ಥಿಗಳ ತಂದೆ,ತಾಯಿ/ಪೋಷಕರ ವಾರ್ಷಿಕ ವರಮಾನ 2.5 ಲಕ್ಷ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ತಂದೆ,ತಾಯಿ/ಪೋಷಕರ ವಾರ್ಷಿಕ ವರಮಾನ 1.00 ಲಕ್ಷವಿರುವ ವಿದ್ಯಾರ್ಥಿಗಳಿಗೆ ಬೋಧನ ಶುಲ್ಕ, ಪರೀಕ್ಷಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ, ಗ್ರಂಥಾಲಯ ಶುಲ್ಕಗಳಿಂದ ವಿನಾಯಿತಿ ನೀಡಬೇಕು. ಈ ರೀತಿ ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿದ್ಯಾರ್ಥಿ ವೇತನಕ್ಕೆ ನಿಗಧಿತ ಸಮಯದಲ್ಲಿ ಸಂಬಂಧಿಸಿದ ಇಲಾಖೆಗೆ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿರಬೇಕು ಮತ್ತು ಪ್ರಾಂಶುಪಾಲರು ಸಹ ಅರ್ಜಿ ಸಲ್ಲಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ವಿದ್ಯಾರ್ಥಿ ವೇತನ ಮಂಜೂರಾಗದಂತಹ ಅಥವಾ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದಂತಹ ವಿದ್ಯಾರ್ಥಿಗಳಿಂದ ವಿನಾಯಿತಿ ನೀಡಿದ ಶುಲ್ಕವನ್ನು ಪಾವತಿಸಿಕೊಳ್ಳಬೇಕು.

11. ಸರ್ಕಾರದಿಂದ ಅನುದಾನ ಪಡೆಯುವ ಕಾಲೇಜುಗಳು, ಸರ್ಕಾರ ಮತ್ತು ವಿಶ್ವವಿದ್ಯಾನಿಲಯ ಆಯಾ ಕೋರ್ಸುಗಳಿಗೆ ನಿಗಧಿಪಡಿಸಿರುವ ಶುಲ್ಕಗಳನ್ನು ಮಾತ್ರ ಪಾವತಿಸಿಕೊಳ್ಳಬೇಕು. ಹೆಚ್ಚು ಶುಲ್ಕ ಪಡೆಯುವಂತಿಲ್ಲ, ಒಂದು ಪಕ್ಷ ಹೆಚ್ಚು ಶುಲ್ಕ ಸಂದಾಯ ಮಾಡಿಕೊಂಡಲ್ಲಿ ಅಂತಹ ಕಾಲೇಜುಗಳ ಮೇಲೆ ಶಿಸ್ತು ಕ್ರಮ ಜರುಗಿಸ ಬೇಕಾಗುತ್ತದೆ.

12. UGC ಪತ್ರ ಸಂಖ್ಯೆ:F.1-15/2015(ARC) ದಿನಾಂಕ: 18-03-2016ರ ರೀತ್ಯಾ ವಿಶ್ವವಿದ್ಯಾನಿಲಯ ಸಂಯೋಜಿತ ಎಲ್ಲಾ ಪದವಿ ಕಾಲೇಜುಗಳಲ್ಲಿ Anti-Ragging ಘಟಕವನ್ನು ಸ್ಥಾಪಿಸಿರಬೇಕು, ವಿದ್ಯಾರ್ಥಿಗಳು ಯಾವುದೇ ರೀತಿಯಲ್ಲಿ Raggingಗೆ ಒಳಗಾಗದಂತೆ(ಪ್ರಾಂಶುಪಾಲರು/ಮುಖ್ಯಸ್ಥರು ಸಮಿತಿ ವತಿಯಿಂದ) ಎಚ್ಚರವಹಿಸುವುದು.

13/08/2024

**ಕುಲಸಚಿವ**

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

**ಇವರಿಗೆ:**

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಬಿ.ಎ./ ಬಿ.ಎಸ್ಸಿ./ ಬಿ.ಸಿ.ಎ./ ಬಿ.ಕಾಂ./ ಬಿ.ಬಿ.ಎ/ಬಿ.ಬಿ.ಎ(ಟೂರಿಸಂ ಆಂಡ್ ಟ್ರಾವಲ್)/ ಬಿ.ಎ(ಫೈನ್ಆರ್ಟ್ಸ್)/ ಬಿ.ಬಿ.ಎ.(ಟೂರಿಸಂ & ಹಾಸ್ಪಿಟಾಲಟಿ)/ಬಿ.ಎಸ್.ಡಬ್ಲ್ಯೂ./ಬಿ.ವಿಶ್ಯುಲ್ ಆರ್ಟ್ಸ್.(ನಾಲ್ಕು ವರ್ಷ)/ / ಬಿ.ಎ. ಎಸ್ ಎಲ್ ಪಿ, ಘಟಕ/ಸ್ವಾಯತ್ತ ಹಾಗೂ ಸಂಯೋಜಿತ ಪದವಿ ಕಾಲೇಜುಗಳ **ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.**
2. **ನಿರ್ದೇಶಕರು, ಮೈ.ವಿ.ವಿ.ಕಾನೂನು ಶಾಲೆ, ಮಾನಸಗಂಗೋತ್ರಿ, ಮೈಸೂರು**
3. ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.- **ಮಾಹಿತಿಗಾಗಿ**
4. ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ/ವಾಣಿಜ್ಯ/ಕಲಾ ಮತ್ತು ಕಾನೂನು ನಿಕಾಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ನಿರ್ದೇಶಕರು, ಅಂತರಾಷ್ಟೀಯ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜು ಆವರಣ, ಮಾನಸಗಂಗೋತ್ರಿ, ಮೈಸೂರು.
8. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
9. ನಿರ್ದೇಶಕರು, ಪಿ.ಎಂ.ಇ.ಬೋರ್ಡ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
10. ಸಂಯೋಜಕರು. ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ., ಮೈಸೂರು.- **ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿ ಕೋರಿದೆ.**

## ಅನುಬಂಧ-1

## ರಾಷ್ಟ್ರೀಯ ಶಿಕ್ಷಣ ನೀತಿ-2020 ಅನುಷ್ಠಾನದ ಮಾರ್ಗಸೂಚಿಗಳು

1. ಪ್ರಸಕ್ತ ವರ್ಷಕ್ಕೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಬಿ.ಎ. ಅಥವಾ ಬಿ.ಎಸ್‌ಸಿ. ಪದವಿ ಅಧ್ಯಯನಕ್ಕೆ ಆಯಾಯ ಕಾಲೇಜುಗಳಲ್ಲಿ ಲಭ್ಯವಿರುವ ಎರಡು ವಿಷಯಗಳನ್ನು (Discipline Core) ಆಯ್ಕೆ ಮಾಡಿಕೊಳ್ಳಬೇಕು. ನಂತರ ಮೂರನೇ ವರ್ಷದ ಪ್ರಾರಂಭದಲ್ಲಿ ಒಂದು ವಿಷಯವನ್ನು ಮೇಜರ್ ಆಗಿಯೂ, ಇನ್ನೊಂದು ವಿಷಯವನ್ನು ಮೈನರ್ ವಿಷಯವನ್ನಾಗಿಯೂ ಅಥವಾ ಎರಡೂ ವಿಷಯಗಳನ್ನು ಮೇಜರ್ ಆಗಿ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬಹುದು.

2. ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವ ಎರಡು ವಿಷಯಗಳ (Discipline Core) ಜೊತೆಗೆ, ಕನ್ನಡ ಮತ್ತು ಇನ್ನೊಂದು ಭಾಷಾ ವಿಷಯಗಳನ್ನು ಮತ್ತು ಪ್ರೋಗ್ರಾಮ್ ವಿನ್ಯಾಸಕ್ಕೆ (Curriculum Structure) ಅನುಗುಣವಾಗಿ Open Electives ಮತ್ತು Discipline Electives ಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಪಿ.ಯು.ಸಿ. ಅಥವಾ 10+2 ಹಂತದಲ್ಲಿ ಕನ್ನಡ ಕಲಿಯದವರಿಗೆ ಅಥವಾ ಕನ್ನಡ ಮಾತೃ ಭಾಷೆಯಲ್ಲದವರಿಗೆ ಬೇರೆ ಕನ್ನಡ ಪಠ್ಯಕ್ರಮವನ್ನು ರೂಪಿಸಿ ಬೋಧಿಸತಕ್ಕದ್ದು.

3. ವಿಷಯಾಧಾರಿತ ಸ್ನಾತಕ ಪದವಿ ಅಧ್ಯಯನಗಳಿಗೆ (B.Com, BCA, BBA, BVA, BPA, etc.) ಸಂಬಂಧಪಟ್ಟ ಹಾಗೆ ವಿಷಯಗಳನ್ನು (Discipline Core) ಆಯ್ಕೆ ಮಾಡಿಕೊಳ್ಳುವ ಅವಶ್ಯಕತೆಯಿರುವುದಿಲ್ಲ, ಅವರು ಕೇವಲ ಕನ್ನಡ ಹಾಗೂ ಮತ್ತೊಂದು ಭಾಷೆಗಳು ಮತ್ತು ಪ್ರೋಗ್ರಾಮ್ ವಿನ್ಯಾಸಕ್ಕೆ (Curriculum Structure) ಅನುಗುಣವಾಗಿ Open Electives ಮತ್ತು Discipline Electives ಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

4. ವಿದ್ಯಾರ್ಥಿಯು ಪ್ರಥಮ ವರ್ಷದಲ್ಲಿ (National Skills Qualifications Framework Level 5) ನಿಗಧಿತ ಪಠ್ಯಕ್ರಮವನ್ನು ಅಧ್ಯಯನ ಮಾಡಿ, ಅವಶ್ಯಕ credit ಗಳನ್ನು ಗಳಿಸಿ ಕಾರಣಾಂತರಗಳಿಂದ ಅಧ್ಯಯನದಿಂದ ನಿರ್ಗಮಿಸಿದರೆ ಪ್ರಮಾಣ ಪತ್ರವನ್ನು(Certificate) ನೀಡಬೇಕು.

5. ವಿದ್ಯಾರ್ಥಿಯು ಎರಡನೇ ವರ್ಷದ ಅಧ್ಯಯನವನ್ನು ಮುಂದುವರೆಸಿ (National Skills Qualifications Framework Level 6) ನಿಗಧಿತ ಪಠ್ಯಕ್ರಮವನ್ನು ಅಧ್ಯಯನ ಮಾಡಿ ಅವಶ್ಯಕ credit ಗಳನ್ನು ಗಳಿಸಿ ಕಾರಣಾಂತರಗಳಿಂದ ಅಧ್ಯಯನದಿಂದ ನಿರ್ಗಮಿಸಿದರೆ ಡಿಪ್ಲೋಮಾ (Diploma) ನೀಡಬೇಕು.

6. ವಿದ್ಯಾರ್ಥಿಯು ಮೂರನೇ ವರ್ಷದ ಅಧ್ಯಯನವನ್ನು ಮುಂದುವರೆಸಿ (National Skills Qualifications Framework Level 7) ನಿಗಧಿತ ಪಠ್ಯಕ್ರಮವನ್ನು ಅಧ್ಯಯನ ಮಾಡಿ ಅವಶ್ಯಕ credit ಗಳನ್ನು ಗಳಿಸಿದರೆ ಸ್ನಾತಕ ಪದವಿಯನ್ನು (Bachelor Degree) ನೀಡುವುದು.

7. ವಿದ್ಯಾರ್ಥಿಗಳು ತಾವು ಅಧ್ಯಯನ ಮಾಡುತ್ತಿರುವ ಮಹಾವಿದ್ಯಾಲಯದಲ್ಲಿ ನಾಲ್ಕನೇ ವರ್ಷದ ಅಧ್ಯಯನ ಲಭ್ಯವಿದ್ದಲ್ಲಿ (National Skills Qualifications Framework Level 8) ಅವರು ಆಯ್ಕೆ ಮಾಡಿದ ಐಚ್ಛಿಕ ವಿಷಯಗಳ ಅಧ್ಯಯನವನ್ನು ಮುಂದುವರಸಿ ಅವಶ್ಯಕ credit ಗಳನ್ನು ಗಳಿಸಿ ಅಧ್ಯಯನವನ್ನು ಪೂರ್ಣಗೊಳಿಸಿದರ ಸ್ನಾತಕ ಹಾನರ್ಸ್ ಪದವಿ (Honours Degree) ಪಡೆಯಬಹುದು. ನಾಲ್ಕನೇ ವರ್ಷದಲ್ಲಿ ಸಂಶೋಧನ ಕೆಲಸವು (Research Project) ಅಧ್ಯಯನದ ಭಾಗವಾದರೆ, ಅಂತಹ ಸ್ನಾತಕ ಹಾನರ್ಸ್ ಪದವೀಧರರು ನೇರವಾಗಿ ಡಾಕ್ಟರೇಟ್ (Ph.D) ಪದವಿ ಅಧ್ಯಯನಕ್ಕೆ ಸೇರಲು ಅರ್ಹರಾಗುತ್ತಾರೆ.

8. ಒಂದು ವೇಳೆ ವಿದ್ಯಾರ್ಥಿಯು ಅಧ್ಯಯನ ಮಾಡುತ್ತಿರುವ ಮಹಾವಿದ್ಯಾಲಯದಲ್ಲಿ ಸ್ನಾತಕ ಹಾನರ್ಸ್ ಪದವಿ ತರಗತಿಗಳು ಲಭ್ಯವಿಲ್ಲದಿದ್ದರೆ, ವಿದ್ಯಾರ್ಥಿಯು ನಾಲ್ಕನೇ ವರ್ಷದ ಸ್ನಾತಕ ಹಾನರ್ಸ್ ಪದವಿಗೆ ಬೇರೊಂದು ಮಹಾವಿದ್ಯಾಲಯವನ್ನು ಸೇರಬಹುದು.

9. ಮಹಾವಿದ್ಯಾಲಯಗಳು ನಾಲ್ಕನೇ ವರ್ಷದ ಸ್ನಾತಕ ಹಾನರ್ಸ್ ಪದವಿ ತರಗತಿಗಳನ್ನು ನಡೆಸಲೇಬೇಕೆಂಬ ಕಡ್ಡಾಯವಿಲ್ಲ.

10. ವಿದ್ಯಾರ್ಥಿಯು ಅಧ್ಯಯನದ ಯಾವುದೇ ಹಂತದಲ್ಲಿ ಕಾರಣಾಂತರಗಳಿಂದ ಅಧ್ಯಯನವನ್ನು ನಿಲ್ಲಿಸಿದ್ದಲ್ಲಿ, ನಂತರ ಅದೇ ಹಂತದಿಂದ ಅಧ್ಯಯನವನ್ನು ಮುಂದುವರೆಸಬಹುದು.

11. ವಿದ್ಯಾರ್ಥಿಯು ಯಾವುದೇ ಹಂತದಲ್ಲಿ ಗಳಿಸಬೇಕಾದ credit ಗಳ ಗರಿಷ್ಠ ಶೇಕಡಾ 40% ರಷ್ಟು credit ಗಳನ್ನು, ಅಧಿಕೃತ ಆನ್‌ಲೈನ್ ಕೋರ್ಸ್‌ಗಳ ಮುಖಾಂತರ ಗಳಿಸಿ ತನ್ನ ಶೈಕ್ಷಣಿಕ ಖಾತೆಯಲ್ಲಿ ಜಮಾ ಮಾಡಿಕೊಳ್ಳಬಹುದು.

12. ವಿದ್ಯಾರ್ಥಿಯು ಯಾವ ವಿಶ್ವವಿದ್ಯಾಲಯದಿಂದ ಪದವಿಗಳನ್ನು ಪಡೆಯಲು ಬಯಸುತ್ತಾನೆಯೋ, ಆ ವಿಶ್ವವಿದ್ಯಾಲಯದಿಂದ ಕನಿಷ್ಠ ಶೇಕಡ 50% credit ಗಳನ್ನು ಪಡೆದುಕೊಳ್ಳಬೇಕಾಗಿರುತ್ತದೆ.

13. ವಿದ್ಯಾರ್ಥಿಯು Discipline Core, Open Electives ಮತ್ತು Discipline Electives ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಆ ವಿಷಯದ ಅಧ್ಯಯನಕ್ಕೆ ನಿಗದಿತ ಪೂರಕ ಅವಶ್ಯಕತೆಗಳನ್ನು (Pre-Requisite) ಪೂರೈಸಬೇಕಾಗುತ್ತದೆ, ಉದಾಹರಣೆಗೆ: Physics ಅಥವಾ Mathematics ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕಾದರೆ, PUC ಅಥವಾ (10+2) ನಲ್ಲಿ ಆ ವಿಷಯಗಳನ್ನು ಅಧ್ಯಯನ ಮಾಡಿರಬೇಕು. ಒಂದು ವೇಳೆ PUC ಅಥವಾ (10+2) ನಲ್ಲಿ ಆ ವಿಷಯವನ್ನು ಅಧ್ಯಯನ ಮಾಡಿರದಿದ್ದರೆ, ಆ ವಿಷಯದಲ್ಲಿ ಅಧಿಕೃತ Prerequisite Course ಗಳನ್ನು ಅಧ್ಯಯನ ಮಾಡಿರಬೇಕಾಗುತ್ತದೆ.

14. ವಿದ್ಯಾರ್ಥಿಗಳು ಸಮ ಸಂಖ್ಯೆಯ ಸೆಮಿಸ್ಟರ್ ನಂತರ ನಿರ್ಗಮಿಸಬಹುದು, ಆಗ ಮಾತ್ರ ನಿಗದಿತ Certificate, Diploma, ಸ್ನಾತಕ ಪದವಿ ಅಥವಾ ಸ್ನಾತಕ ಹಾನರ್ಸ್ ಪದವಿ ನೀಡಲು ಸಾಧ್ಯವಾಗುತ್ತದೆ. ಪ್ರತಿಯೊಂದು ಹಂತಕ್ಕೆ ಎರಡು ಸೆಮಿಸ್ಟರ್ ಗಳಲ್ಲಿ ನಿಗದಿಪಡಿಸಿದ ಅಧ್ಯಯನವನ್ನು ಪೂರ್ಣಗೊಳಿಸಬೇಕಾಗುತ್ತದೆ.

15. ಬೆಸ ಸಂಖ್ಯೆಯ ಸೆಮಿಸ್ಟರ್‌ಗಳಿಗೆ ಮಾತ್ರ ಪುನರ್‌ಪ್ರವೇಶ ಪಡೆಯಬಹುದು.

16. ಮೂರು ವರ್ಷದ ಸ್ನಾತಕ ಪದವಿ ಅಥವಾ ನಾಲ್ಕು ವರ್ಷದ ಸ್ನಾತಕ ಹಾನರ್ಸ್ ಪದವಿ ಜೊತೆಗೆ ಅರ್ಹ ಮಹಾವಿದ್ಯಾಲಯಗಳು ಐದು ವರ್ಷದ ಏಕೀಕೃತ ಸ್ನಾತ್ರಕೋತ್ತರ ಪದವಿಗಳನ್ನು ನಡೆಸಬಹುದು. ಆ ಸಂದರ್ಭಗಳಲ್ಲಿ ಮೂರು ಮತ್ತು ನಾಲ್ಕನೇ ವರ್ಷದ ಅಧ್ಯಯನ ಮುಗಿಸಿ ಕಾರಣಾಂತರಗಳಿಂದ ನಿರ್ಗಮಿಸಿದರೆ ಅನುಕ್ರಮವಾಗಿ ಸ್ನಾತಕ ಮತ್ತು ಸ್ನಾತಕ ಹಾನರ್ಸ್ ಪದವಿಗಳನ್ನು ನೀಡಬಹುದು.

17. ಸ್ನಾತಕೋತ್ತರ ಪದವಿಗಳು ಒಂದು ಅಥವಾ ಎರಡು ವರ್ಷಗಳ ಅವಧಿಯದ್ದಾಗಿರುತ್ತವೆ. ಒಂದು ವರ್ಷದ ಸ್ನಾತಕೋತ್ತರ ಪದವಿಗೆ ಸೇರಲು ನಾಲ್ಕು ವರ್ಷದ ಸ್ನಾತಕ ಹಾನರ್ಸ್ ಪದವಿ ಪಡೆದ ಪದವೀದರರು ಅರ್ಹರಾಗಿರುತ್ತಾರೆ, ಹಾಗೆಯೇ ಎರಡು ವರ್ಷದ ಸ್ನಾತಕೋತ್ತರ ಪದವಿಗೆ ಸೇರಲು ಮೂರು ವರ್ಷದ ಸ್ನಾತಕ ಪದವಿ ಪಡೆದವರು ಅರ್ಹರಾಗುತ್ತಾರೆ.

18. ಎರಡು ವರ್ಷದ ಸ್ನಾತಕೋತ್ತರ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು, ಮೊದಲನೇ ವರ್ಷದ ಆಯ್ಕೆ ವಿಷಯಗಳಲ್ಲಿ ನಿಗದಿತ credit ಗಳನ್ನು ಗಳಿಸಿ ನಿರ್ಗಮಿಸಿದರೆ, ಸ್ನಾತಕೋತ್ತರ ಡಿಪ್ಲೋಮಾ (Post-Graduate Diploma) ನೀಡಬಹುದು.

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ
(ವಿಶ್ವವಿದ್ಯಾಲಯ-1)
ಉನ್ನತ ಶಿಕ್ಷಣ ಇಲಾಖೆ